## ಕರ್ನಾಟಕ ಸರ್ಕಾರ

ವಿಷಯ: ಸರ್ಕಾರಿ ನೌಕರರು ಒಂದು ಬಾರಿಗೆ ಪಡೆಯಬಹುದಾದ ಗರಿಷ್ಠ ಸಾಂದರ್ಭಿಕ ರಜೆಯ ಮಿತಿಯನ್ನು ನಿರ್ಬಂಧಿಸುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಆದೇಶ ಸಂ.ಆಇ 16 ಎಸ್‌ಆರ್‌ಎ 89, ದಿನಾಂಕ: 09-03-1989.

2. ಸರ್ಕಾರ ಅಧಿಸೂಚನೆ ಸಂ. ಸಿಆಸುಇ 02 ವೆಚ್‌ವೆಚ್‌ಎಲ್ 2019, ದಿನಾಂಕ: 13-06-2019

---

ಪ್ರಸ್ತಾವನೆ:-

ಮೇಲೆ ಓದಲಾದ (1)ರ ಸರ್ಕಾರದ ಆದೇಶದಲ್ಲಿ ರಾಜ್ಯ ಸರ್ಕಾರಿ ನೌಕರರಿಗೆ ಪ್ರತಿ ಕ್ಯಾಲೆಂಡರ್ ವರ್ಷದಲ್ಲಿ 15 ದಿವಸಗಳ ಸಾಂದರ್ಭಿಕ ರಜೆಯನ್ನು ಮಂಜೂರು ಮಾಡಲು ಆದೇಶಿಸಲಾಗಿತ್ತು. ನಂತರ, ಮೇಲೆ ಓದಲಾದ (2)ರ ಸರ್ಕಾರದ ಆದೇಶದಲ್ಲಿ 15 ದಿವಸಗಳ ಸಾಂದರ್ಭಿಕ ರಜೆಯನ್ನು 10 ದಿವಸಗಳಿಗೆ ಇಳಿಸಿ ಆದೇಶಿಸಲಾಗಿದೆ.

ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ಅನುಬಂಧ-ಬಿ ಯ ನಿಯಮ(1) ರನ್ವಯ 15 ದಿನಗಳ ಸಾಂದರ್ಭಿಕ ರಜೆ ಜಾರಿಯಲ್ಲಿದ್ದ ಸಂದರ್ಭದಲ್ಲಿ ಒಂದು ಬಾರಿಗೆ ಪಡೆಯಬಹುದಾದ ಗರಿಷ್ಠ ಸಾಂದರ್ಭಿಕ ರಜೆಯ ಮಿತಿಯನ್ನು 7 ದಿನಗಳಿಗೆ ಸೀಮಿತಗೊಳಿಸಿ, ಸಾರ್ವತ್ರಿಕ ರಜೆಯೊಂದಿಗೆ ಸಂಯೋಜಿಸಿದಾಗ ಈ ಅವಧಿಯನ್ನು 10 ದಿವಸಗಳಿಗೆ ನಿರ್ಬಂಧಿಸಿ ಅವಕಾಶ ಕಲ್ಪಿಸಲಾಗಿತ್ತು. ಮೇಲೆ ಓದಲಾದ (2)ರ ಆದೇಶದಲ್ಲಿ ಸಾಂದರ್ಭಿಕ ರಜೆಯನ್ನು 10 ದಿವಸಗಳಿಗೆ ಇಳಿಸಿರುವ ಹಿನ್ನೆಲೆಯಲ್ಲಿ ಒಂದು ಬಾರಿಗೆ ಪಡೆಯಬಹುದಾದ ಗರಿಷ್ಠ ಸಾಂದರ್ಭಿಕ ರಜೆಯನ್ನು 5 ದಿನಗಳಿಂದು ನಿರ್ಬಂಧಿಸಲು ಹಾಗೂ ಸಾರ್ವತ್ರಿಕ ರಜೆಯೊಂದಿಗೆ ಸಂಯೋಜಿಸಿದಾಗ ಈ ಅವಧಿಯನ್ನು 8 ದಿವಸಗಳಿಗೆ ನಿರ್ಬಂಧಿಸಿ ಅವಕಾಶ ಕಲ್ಪಿಸಲು ನಿರ್ಧರಿಸಲಾಗಿದೆ. ಆದ್ದರಿಂದ, ಈ ಕೆಳಕಂಡ ಆದೇಶವನ್ನು ಹೊರಡಿಸಿದೆ.

**ಸರ್ಕಾರ ಆದೇಶ ಸಂಖ್ಯೆ: ಆಇ 03 ಸನಿತಿ 2020 (ಇ) ಬೆಂಗಳೂರು, ದಿನಾಂಕ: 15.10.2020**

ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ಅನುಬಂಧ-ಬಿ ಯಲ್ಲಿನ ಸಾಂದರ್ಭಿಕ ರಜೆಯ ಮಂಜೂರಾತಿ ಬಗ್ಗೆ ಈ ಕೆಳಕಂಡಂತೆ ಓದಿಕೊಳ್ಳತಕ್ಕದ್ದು:

| ಕ್ರಸಂ. | ಪ್ರಸ್ತುತ ಅನುಬಂಧ-ಬಿ ಯಲ್ಲಿರುವ ಅವಕಾಶ | ಈ ಕೆಳಕಂಡಂತೆ ಓದಿಕೊಳ್ಳತಕ್ಕದ್ದು |
|---|---|---|
| 1. | ಅನುಬಂಧ-ಬಿ ಯ ನಿಯಮ (1)ರಲ್ಲಿ ಪ್ರತಿ ಕ್ಯಾಲೆಂಡರ್ ವರ್ಷದಲ್ಲಿ 15 ದಿನಗಳ ಸಾಂದರ್ಭಿಕ ರಜೆಯನ್ನು ಮಂಜೂರು ಮಾಡಬಹುದು. ಆದರೆ ಒಂದು ಬಾರಿಗೆ 7 ದಿನಗಳಿಗಿಂತ ಹೆಚ್ಚಿಗೆ ರಜೆ ಮಂಜೂರು ಮಾಡತಕ್ಕದ್ದಲ್ಲ. | ಪ್ರತಿ ಕ್ಯಾಲೆಂಡರ್ ವರ್ಷದಲ್ಲಿ 10 ದಿನಗಳ ಸಾಂದರ್ಭಿಕ ರಜೆಯನ್ನು ಮಂಜೂರು ಮಾಡಬಹುದು. ಆದರೆ ಒಂದು ಬಾರಿಗೆ 5 ದಿನಗಳಿಗಿಂತ ಹೆಚ್ಚಿಗೆ ರಜೆ ಮಂಜೂರು ಮಾಡತಕ್ಕದ್ದಲ್ಲ. |

| | | |
|---|---|---|
| 2. | ಅನುಬಂಧ–ಬಿ ಯ ನಿಯಮ (1) ರಲ್ಲಿನ ಟಿಪ್ಪಣಿಯಲ್ಲಿ ಬರುವ ಗೊತ್ತುಪಡಿಸಿದ 15 ದಿನಗಳ ಪರಿಮಿತಿಗೆ ಒಳಪಟ್ಟು | ಗೊತ್ತುಪಡಿಸಿದ 10 ದಿನಗಳ ಪರಿಮಿತಿಗೆ ಒಳಪಟ್ಟು |
| 3. | ಅನುಬಂಧ–ಬಿ ಯ ನಿಯಮ (2) ರಲ್ಲಿನ 'ಭಾನುವಾರ ಮತ್ತು ರಜಾ ದಿನಗಳನ್ನು ಬಿಟ್ಟು ಒಂದು ಗೈರು ಹಾಜರಿಯ ಅವಧಿಯಲ್ಲಿ ಏಳು ದಿನಗಳಿಗಿಂತ ಹೆಚ್ಚು ದಿನದ ಸಾಂದರ್ಭಿಕ ರಜೆಯನ್ನು ಮಂಜೂರು ಮಾಡತಕ್ಕದ್ದಲ್ಲ. ಅಷ್ಟೇ ಅಲ್ಲದೆ, ಅಂಥ ಗೈರು ಹಾಜರಿಯ ಅವಧಿಯು ಯಾವ ಸಂದರ್ಭದಲ್ಲೂ ಹತ್ತು ದಿನಗಳಿಗೆ ಮೀರಬಾರದು'. | ಭಾನುವಾರ ಮತ್ತು ರಜಾ ದಿನಗಳನ್ನು ಬಿಟ್ಟು ಒಂದು ಗೈರು ಹಾಜರಿಯ ಅವಧಿಯಲ್ಲಿ ಐದು (5) ದಿನಗಳಿಗಿಂತ ಹೆಚ್ಚು ದಿನದ ಸಾಂದರ್ಭಿಕ ರಜೆಯನ್ನು ಮಂಜೂರು ಮಾಡತಕ್ಕದ್ದಲ್ಲ. ಅಷ್ಟೇ ಅಲ್ಲದೆ, ಅಂಥ ಗೈರು ಹಾಜರಿಯ ಅವಧಿಯು ಯಾವ ಸಂದರ್ಭದಲ್ಲೂ ಎಂಟು (8) ದಿನಗಳಿಗೆ ಮೀರಬಾರದು. |
| 4. | ಅನುಬಂಧ–ಬಿ ಯ ನಿಯಮ (4) ರಲ್ಲಿ ಬರುವ 'ಒಂದು ಬಾರಿಗೆ 7 ದಿನಗಳ ಪರಿಮಿತಿಯು' | 'ಒಂದು ಬಾರಿಗೆ 5 ದಿನಗಳ ಪರಿಮಿತಿಯು' |

ಸಾಂದರ್ಭಿಕ ರಜೆಯ ಅರ್ಹತೆ ಮತ್ತು ಮಂಜೂರಾತಿ ಬಗ್ಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ಅನುಬಂಧ–ಬಿ ರಲ್ಲಿನ ಇತರೆ ಷರತ್ತುಗಳು ಮುಂದುವರೆಯುತ್ತವೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಜಿ.ಬಿ.ಹೇಮಣ್ಣ)
ಸರ್ಕಾರದ ಉಪ ಕಾರ್ಯದರ್ಶಿ–2
ಆರ್ಥಿಕ ಇಲಾಖೆ.

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು.

ಇವರಿಗೆ:

1. ಸರ್ಕಾರದ ಮುಖ್ಯ ಕಾರ್ಯದರ್ಶಿ/ಅಪರ ಮುಖ್ಯ ಕಾರ್ಯದರ್ಶಿಗಳು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
3. ಎಲ್ಲಾ ಪ್ರಾದೇಶಿಕ ಆಯುಕ್ತರು.
4. ಎಲ್ಲಾ ಇಲಾಖಾ ಮುಖ್ಯಸ್ಥರು/ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
5. ಎಲ್ಲಾ ಜಿಲ್ಲೆಗಳ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
6. ಪ್ರಧಾನ ಮಹಾಲೇಖಪಾಲರು (G&SSA), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, (ಪಿ.ಬಿ. ನಂ. 5398) ಬೆಂಗಳೂರು.
7. ಪ್ರಧಾನ ಮಹಾಲೇಖಪಾಲರು (E&RSA), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, (ಪಿ.ಬಿ.ನಂ.5398) ಬೆಂಗಳೂರು.

3….